# KARNATAKA LOKAYUKTA

No.UPLOK-2/DE.207/2017/ARE-14

Multi Storied Building,
Dr. B.R. Ambedkar Veedhi,
Bengaluru-560 001.
Dated 21.02.2022

## RECOMMENDATION

Sub:- Departmental inquiry against Sri B.A.Praveen Kumar, Village Accountant, Santhemaroor Circle, Doddamagge Hobli, Arakalagudu Taluk, Hassan District – reg.

Ref:- 1) Government Order No.RD 2 BDP 2017 dated 17.01.2017.

2) Nomination order No. UPLOK-2/DE.207/2017 dated 08.02.2017 of Hon'ble Upalokayukta, State of Karnataka.

3) Inquiry report dated 18.02.2022 of Additional Registrar of Enquiries-14, Karnataka Lokayukta, Bengaluru.

~~~~~~

The Government by its order dated 17.01.2017 initiated the disciplinary proceedings against Sri B.A.Praveen Kumar, Village Accountant, Santhemaroor Circle, Doddamagge Hobli, Arakalagudu Taluk, Hassan District, [hereinafter referred to as Delinquent Government Official, for short as
~~~~~~

'DGO'] and entrusted the Departmental Inquiry to this Institution.

2. This Institution by Nomination Order No. UPLOK-2/DE.207/2017 dated 08.02.2017, nominated Additional Registrar of Enquiries-1, as the Inquiry Officer to frame charges and to conduct departmental inquiry against DGO for the alleged charge of misconduct, said to have been committed by him. Subsequently, the matter was transferred to Additional Registrar of Enquiries-7 and then to Additional Registrar of Enquiries-14 to continue the said enquiry.

3. The DGO was tried for the charge of demanding and accepting bribe of Rs.3000/- from the complainant for changing katha of the land purchased by the complainant into his name and thereby committed misconduct.

4. The Inquiry Officer (Additional Registrar of Enquiries-14) on proper appreciation of oral and documentary evidence has held that, the above charge against the DGO Sri

B.A.Praveen Kumar, Village Accountant, Santhemaroor Circle, Doddamagge Hobli, Arakalagudu Taluk, Hassan District, is ' not proved '.

5. On re-consideration of report of inquiry, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Inquiry Officer and exonerate DGO Sri B.A.Praveen Kumar, Village Accountant, Santhemaroor Circle, Doddamagge Hobli, Arakalagudu Taluk, Hassan District, of the charges leveled against him.

6. Action taken in the matter shall be intimated to this Authority.

Connected records are enclosed herewith.

21/2/22

(JUSTICE B.S.PATIL)
Upalokayukta-2,
State of Karnataka.

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್–2/ಡಿಇ–207/2017/ಎ.ಆರ್.ಇ–14

ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು–560001,
ದಿನಾಂಕ: 18/02/2022.

## ವಿಚಾರಣಾ ವರದಿ

**ಉಪಸ್ಥಿತರು: ಸುದೇಶ್ ರಾಜಾರಾಮ್ ಪರದೇಶಿ,**
ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌಕರ ಶ್ರೀ. ಬಿ.ಎ ಪ್ರವೀಣ್‌ಕುಮಾರ್, ಗ್ರಾಮ ಲೆಕ್ಕಿಗರು, ಸಂತೆಮರೂರು ವೃತ್ತ, ದೊಡ್ಡಮಗ್ಗೆ ಹೋಬಳಿ, ಅರಕಲಗೂಡು ತಾಲ್ಲೂಕು. ಹಾಸನ ಜಿಲ್ಲೆ ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**

1. ಕಂಪ್ಲೆಂಟ್/ಉಪಲೋಕ್/ಎಂವೈಎಸ್/1347/2016/ಉನಿವಿ–5 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 01/12/2016.
2. ಸರ್ಕಾರದ ಆದೇಶ ಸಂಖ್ಯೆ: ಕಂಇ 2 ಬಿಡಿಪಿ 2017, ಬೆಂಗಳೂರು, ದಿನಾಂಕ: 17/01/2017.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್–2/ಡಿಇ/207/2017, ಬೆಂಗಳೂರು ದಿನಾಂಕ: 08/02/2017.
4. Order No.UPLOK-2/DE/2017 Bangalore, Dtd: 04/07/2017 file transferred from ARE-1 to ARE-7.
5. Order No.UPLOK-1&2/DE/Transfers/2018 Bengaluru, Dtd: 06/08/2018 file is transferred from ARE-7 to ARE-14.

* * * * * *

ಮಾನ್ಯ ಅಪರ ಪೋಲಿಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಹಾಸನ ಲೋಕಾಯುಕ್ತ ಪೋಲಿಸ್ ನಿರೀಕ್ಷಕರು (ಇನ್ನು ಮುಂದೆ "ತನಿಖಾಧಿಕಾರಿ" ಎಂದು ಕರೆಯಲ್ಪಡುತ್ತಾರೆ) ಸಲ್ಲಿಸಿದ ತನಿಖಾ ವರದಿಯನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ್ದು, ಸದರಿ ವರದಿಯನ್ವಯ **ಶ್ರೀ. ಬಿ.ಎ ಪ್ರವೀಣ್‌ಕುಮಾರ್,** ಗ್ರಾಮ ಲೆಕ್ಕಿಗರು, ಸಂತೆಮರೂರು ವೃತ್ತ, ದೊಡ್ಡಮಗ್ಗೆ ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ (ಇನ್ನು ಮುಂದೆ ಆಪಾದಿತ ಸರ್ಕಾರಿ ನೌಕರ "ಆ.ಸ.ನೌ" ಎಂದು ಕರೆಯಲ್ಪಡುತ್ತಾರೆ) ರವರು ದೂರುದಾರಾದ **ಶ್ರೀ. ಜೆ. ಶಂಕರ್** ಬಿನ್ ಜವರಯ್ಯ, ದುಮ್ಮಿ ಗ್ರಾಮ, ದೊಡ್ಡಮಗ್ಗೆ ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ರವರಿಂದ ಸರ್ಕಾರಿ ಕೆಲಸಕ್ಕೆ ಲಂಚದ ಹಣವನ್ನು ಪಡೆದು ಕರ್ತವ್ಯ ಲೋಪ ಎಸಗಿರುವುದು ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2) ರನ್ವಯ ತನಿಖೆಯನ್ನು ಕೈಗೊಂಡಿದ್ದು ಇರುತ್ತದೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2)ರಲ್ಲಿ ಕಾಣಿಸಿದಂತೆ, ದಿನಾಂಕ: 17/01/2017ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಕೋರಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 08/02/2017 ರಂದು ಅಪರ ನಿಬಂಧಕರು, ವಿಚಾರಣೆಗಳು-1 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3)ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿದ್ದು, ಉಲ್ಲೇಖ (4) ರಂತೆ ಅಪರ ನಿಬಂಧಕರು ವಿಚಾರಣೆಗಳು-1 ರವರಿಂದ ಈ ಕಡತ ಅಪರ ನಿಬಂಧಕರು ವಿಚಾರಣೆಗಳು-7 ರವರಿಗೆ ವರ್ಗಾವಣೆಗೊಂಡಿದ್ದು, ಪುನಃ ಉಲ್ಲೇಖ (5) ರಂತೆ ಅಪರ ನಿಬಂಧಕರು ವಿಚಾರಣೆಗಳು-7 ರವರಿಂದ ಈ ಕಡತ ಅಪರ ನಿಬಂಧಕರು ವಿಚಾರಣೆಗಳು-14 ರವರಿಗೆ ವರ್ಗಾವಣೆಗೊಂಡಿರುತ್ತದೆ.

3. ನಾಮನಿರ್ದೇಶನದ ಆದೇಶದಂತೆ, **ಆ.ಸ.ನೌ ಶ್ರೀ. ಬಿ.ಎ ಪ್ರವೀಣ್‌ಕುಮಾರ್, ಗ್ರಾಮ ಲೆಕ್ಕಿಗರು, ಸಂತೆಮರೂರು ವೃತ್ತ, ದೊಡ್ಡಮಗ್ಗೆ ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ ರವರ ವಿರುದ್ಧ ದೋಷಾರೋಪಣೆ *(Articles of Charge)* ಅನ್ನು ಅಪರ ನಿಬಂಧಕರು ವಿಚಾರಣೆಗಳು-7 ರವರು ರಚಿಸಿದ್ದು,** ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರಿಗೆ ದಿನಾಂಕ: 04/03/2017 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

## ಅನುಬಂಧ-1

## ದೋಷಾರೋಪಣೆ

*While you DGO Sri. B.A Praveenkumar, working as Village Accountant, Santhemaroor Circle, Doddamagge Hobli, Arakalgudu Taluk, Hassan District, complainant Sri. J. Shankara S/o Javaraiah, Dummi Village, Doddamagge Hobli, Arakalagudu Taluk, Hassan District had approached you for attending to the work of change of khata of the land partitioned between him and his brothers and you demanded bribe of Rs.3,000/- and again on 18/05/2015 when trap was arranged by Lokayukta Police, you demanded and accepted bribe amount of Rs.3,000/- and you were caught red-handed and*

*therefore you DGO has failed to maintain absolute integrity and devotion to duty and committed an act which is unbecoming of a Government Servant and therefore you are guilty of misconduct under Rule 3(1)(i) to (iii) of KCS (Conduct) Rules 1966. Hence, this charge.*

**ಅನುಬಂಧ-2**

**ದೋಷಾರೋಪಣೆಯ ವಿವರ**

**(ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸಕಾಂಡೆಕ್ಟ್)**

2. Brief facts of the case are:-

   (a) The complainant alleges that, the land measuring 3.35 acres in Sy.No.46 of Dummi Village, standing in the name of his mother, was partitioned among brothers and in this regard, they had given application for effecting khata in their names as per the partition deed. The said application came before the respondent. In this regard, he met the respondent and at that time the respondent demanded to pay him Rs.7,000/- and after bargain, directed the complainant to pay at least Rs.3,000/-.

The complainant recorded the said conversation in his mobile and converted it into CD.

(b) Since the complainant was not willing to pay the said amount, he approached Police Inspector, Karnataka Lokayukta, Hassan on 18/05/2015 along with a CD containing demand of bribe by the respondent and lodged the complaint. The Police Inspector of Karnataka Lokayukta, Hassan registered a case against the respondent in Cr. No.7/2015 for the offences punishable under Section.7, 12(1)(d) read with Section 13(2) of Prevention of Corruption Act, 1988.

(c) Thereafter, on the same day at about 1-00 p.m. in the Doddamagge Nada Kacheri, the respondent received the bribe amount of Rs.3,000/- in the presence of shadow witness.

(d) Then, the respondent was caught hold/trapped when found in possession of the tainted (bribe) amount on the said date at said place and the same was seized

under a mahazar by the I.O. in the presence of shadow witness.

(e) Added to that, the respondent had failed to give any satisfactory account or explanation or reply for the said tainted amount (found with him) then, when questioned by the said I.O.

(f) Even there are statements of witnesses, including complainant, besides material and records filed by the said I.O. in connection with the said misconduct of the respondent.

3. On the basis of the said facts and material on record, a case of repeated misconduct is made out showing that respondent, being public servant, has failed to maintain absolute integrity besides devotion to duty and acted in a manner unbecoming of a public servant and thereby made himself liable for disciplinary action.

4. Therefore, investigation was taken up against the respondent and an observation note was sent to him to show cause as to why recommendation should not be made to the

competent authority for initiating departmental inquiry against him. For that, the respondent gave the reply. However, on considering the same, it has not been found convincing to drop the proceedings.

5. Since said facts and material on record prima facie show that the respondents/DGO Sri. B.A Praveenkumar has committed grave misconduct, now, acting under Section 12(3) of the Karnataka Lokayukta Act, recommendation is made to the Competent Authority to initiate disciplinary proceedings against the respondent for misconduct under Rule 3(1)(i) to (iii) of Karnataka Civil Services (Conduct) Rules, 1966 the Government after considering of materials, has entrusted enquiry to Hon'ble Upalokayukta. Hence, the charge.

4. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌರವರು ದಿನಾಂಕ: 19/04/2017 ರಂದು ರಂದು ಹಾಜರಾಗಿದ್ದು, ಆ.ಸ.ನೌ.ರವರ ಪ್ರಥಮ ಮೌಖಿಕ ಹೇಳಿಕೆ, ನಿಯಮ–11 ಕೆ.ಸಿ.ಎಸ್.

(ಸಿಸಿಎ) ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

5. ಆ.ಸ.ನೌರವರಿಗೆ ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಿರುತ್ತದೆ.

6. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌರವರಿಂದ ಲಿಖಿತ ಹೇಳಿಕೆಯನ್ನು ಕೇಳಲಾಗಿತ್ತು.

7. ಆ.ಸ.ನೌರವರು ತಮ್ಮ ಲಿಖಿತ ಹೇಳಿಕೆಯಲ್ಲಿ, ದೋಷಾರೋಪಣೆಯಲ್ಲಿ ಅನುಬಂಧ-1 ಮತ್ತು 2ರಲ್ಲಿ ಆಪಾದಿಸಿದ ಎಲ್ಲಾ ವಿಷಯಗಳು ಸತ್ಯಕ್ಕೆ ದೂರವಾಗಿರುತ್ತದೆ. ದೂರುದಾರರು ಖಾತೆ ಬದಲಾವಣೆಗಾಗಿ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ತಾನು ಲಂಚದ ಹಣಕ್ಕೆ ಬೇಡಿಕೆಯನ್ನು ಇಟ್ಟಿರುವುದಿಲ್ಲ ಹಾಗೂ ಪಡೆದುಕೊಂಡಿರುವುದಿಲ್ಲ. ಈ ವಿಚಾರಣೆಗೆ ಸಂಬಂಧಪಟ್ಟಂತೆ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆ ನಡೆಯುತ್ತಿರುವುದರಿಂದ ಈ ಪ್ರಕರಣದಲ್ಲಿ ವಿಚಾರಣೆ ಮಾಡಲು ಬರುವುದಿಲ್ಲ ಅಂತಾ ಹೇಳಿರುತ್ತಾರೆ. ದೂರುದಾರರಿಗೆ ಸಂಬಂಧಪಟ್ಟಂತೆ ತನ್ನ ಹತ್ತಿರ ಯಾವುದೇ ಕೆಲಸವು ಬಾಕಿ ಇರಲಿಲ್ಲ ಅಂತಾ ಹೇಳಿರುತ್ತಾರೆ. ಅದೇ ರೀತಿ ತಾನು ಯಾವುದೇ ಕರ್ತವ್ಯಲೋಪ ಎಸಗಿರುವುದಿಲ್ಲ ಎಂದು ಹೇಳಿರುತ್ತಾರೆ.

8. ಈ ವಿಚಾರಣೆಯಲ್ಲಿ, ಆ.ಸ.ನೌ.ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರವು ತಮ್ಮ ಪರವಾಗಿ ದೂರುದಾರರನ್ನು ಪಿ.ಡಬ್ಲೂ.1 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ.1 ರಿಂದ 5 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ ಹಾಗೂ ನೆರಳು ಸಾಕ್ಷಿದಾರರಾದ ಶ್ರೀ. ಸಾಗರ ಆರ್ ರವರನ್ನು ಪಿ.ಡಬ್ಲ್ಯೂ.2 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ.6 ಮತ್ತು ನಿ.ಪಿ.7ನ್ನು ಗುರುತುಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಗಳಾದ ಶ್ರೀ. ಶಾಂತಿನಾಥ ವನ್ನೂರು, ಪೋಲಿಸ್ ನಿರೀಕ್ಷಕರು, ಕ.ಲೋ, ಹಾಸನ

ಇವರನ್ನು ಪಿ.ಡಬ್ಲ್ಯೂ.3 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ.8 ರಿಂದ 15 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಆ.ಸ.ನೌ ರವರು ತಮ್ಮ ಸಾಕ್ಷಿಯನ್ನು ಮಾಡಿಸಿರುವುದಿಲ್ಲ ಆದ್ದರಿಂದ ಪ್ರಶ್ನಾವಳಿಯನ್ನು ದಾಖಲು ಮಾಡಿಕೊಂಡಿದ್ದು ಇರುತ್ತದೆ.

9. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಪರಿಶೀಲಿಸಲಾಯಿತು.

10. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

11. ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

12. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1: ನಕಾರಾತ್ಮಕವಾಗಿ.**
**ಅಂಶ 2: ಅಂತಿಮ ಆದೇಶದಂತೆ.**

## ಕಾರಣಗಳು

13. ಶ್ರೀ. ಜೆ. ಶಂಕರ್ ಬಿನ್ ಜವರಯ್ಯ, ದುಮ್ಮಿ ಗ್ರಾಮ, ದೊಡ್ಡಮಗ್ಗೆ ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ ಇವರು ತಮ್ಮ ದೂರಿನಲ್ಲಿ ದುಮ್ಮಿ ಗ್ರಾಮದಲ್ಲಿ ತಮ್ಮ ತಾಯಿ ಲಕ್ಷಮ್ಮ ಇವರ ಜೊತೆಯಲ್ಲಿ ವಾಸವಾಗಿದ್ದು, ಇವರ ತಾಯಿ ಹೆಸರಿನಲ್ಲಿ ಸದರಿ ಗ್ರಾಮದಲ್ಲಿ ಸರ್ವೆ ನಂ.46

ವಿಸ್ತೀರ್ಣ 3 ಎಕರೆ 35 ಗುಂಟೆ ಜಮೀನು ಹೊಂದಿದ್ದು, ಸದರಿ ಜಮೀನನ್ನು ತನ್ನ ಅಣ್ಣತಮ್ಮಂದಿರ ಜೊತೆಗೆ ವಿಭಾಗ ಪತ್ರದ ಮೂಲಕ ಭಾಗ ಮಾಡಿಕೊಂಡಿದ್ದು, ಅವರ ಹೆಸರಿಗೆ ಖಾತೆ ಮಾಡಿಕೊಳ್ಳಲು ದಿನಾಂಕ: 17/03/2015 ರಲ್ಲಿ ಅರಕಲಗೂಡು ತಾಲ್ಲೂಕು ಕಛೇರಿಗೆ ಹೋಗಿ ಅರ್ಜಿಯನ್ನು ಸಲ್ಲಿಸಿರುವುದಾಗಿ ನಮೂದು ಇರುತ್ತದೆ. ತಾಲ್ಲೂಕು ಕಛೇರಿಯಲ್ಲಿ ಸದರಿ ಖಾತೆ ಮಾಡಿಕೊಡಲು 45 ದಿನಗಳ ಕಾಲಾವಕಾಶ ಇರುತ್ತದೆ, ನಂತರ ಸಂಬಂಧಪಟ್ಟವರ ಹೆಸರಿಗೆ ಖಾತೆ ಆಗುತ್ತದೆ ಅಂತಾ ಮಾಹಿತಿ ನೀಡಿದ್ದರು. ಮುಂದುವರೆದು, ದೊಡ್ಡಮಗ್ಗೆ ಹೋಬಳಿ ಗ್ರಾಮ ಲೆಕ್ಕಾಧಿಕಾರಿಯಾದ ಶ್ರೀ. ಪ್ರವೀಣ್‌ಕುಮಾರ್ ಇವರು ತಮ್ಮ ಸಹಾಯಕ ಶ್ರೀ. ಜಲಂಧರ್ ರವರ ಮೂಲಕ ಇವರಿಗೆ ದೊಡ್ಡಮಗ್ಗೆ ನಾಡ ಕಛೇರಿಗೆ ಬರುವಂತೆ ತಿಳಿಸಿದರು ಅಂತಾ ಹೇಳಿರುತ್ತಾರೆ. ಅದರಂತೆ ತಾನು ಸುಮಾರು 10 ದಿನಗಳ ಹಿಂದೆ ನಾಡ ಕಛೇರಿಗೆ ಹೋಗಿ ಗ್ರಾಮ ಲೆಕ್ಕಾಧಿಕಾರಿಯವರನ್ನು ವಿಚಾರಿಸಿದಾಗ ಅವರು ಖಾತೆ ಬದಲಾವಣೆ ಮಾಡಿ ಕೊಡಲು ರೂ.7,000/–ಗಳನ್ನು ಕೊಡುವಂತೆ ಒತ್ತಾಯ ಮಾಡಿದರು ಅಂತಾ ಹೇಳಿರುತ್ತಾರೆ.

14. ಅದಕ್ಕೆ ದೂರುದಾರರು ತಾನು ಬಡವರಾಗಿದ್ದರಿಂದ ಹಣ ಕೊಡಲು ಆಗುವುದಿಲ್ಲ ಅಂತಾ ಹೇಳಿದ್ದು, ಅದಕ್ಕೆ ಗ್ರಾಮ ಲೆಕ್ಕಾಧಿಕಾರಿಗಳು ರೂ.3,000/– ಗಳನ್ನಾದರೂ ಕೊಡಬೇಕು ಇಲ್ಲದಿದ್ದರೆ ಖಾತೆಯನ್ನು ರದ್ದುಪಡಿಸುತ್ತೇನೆ ಅಂತಾ ಹೇಳಿರುತ್ತಾರೆ. ನಂತರ ತಾನು ಮರಳಿ ಊರಿಗೆ ಬಂದಿರುತ್ತೇನೆ ಅಂತಾ ಹೇಳಿರುತ್ತಾರೆ. ನಂತರ ದಿನಾಂಕ: 16/05/2016 ರಂದು ಬೆಳಿಗ್ಗೆ ದೂರುದಾರರ ಮೊಬೈಲ್ ನಂ.9008151250 ರಿಂದ ಗ್ರಾಮ ಲೆಕ್ಕಾಧಿಕಾರಿಗಳ ಮೊಬೈಲ್ ನಂ.9900123708 ಗೆ ಕರೆ ಮಾಡಿ ಖಾತೆ ಬದಲಾವಣೆ ಬಗ್ಗೆ ವಿಚಾರಿಸಿದಾಗ ಆಗಲೂ ಸಹ ಹಣ ಕೊಡಬೇಕೆಂದು ಹೇಳಿದ್ದು, ಸದರಿ ಸಂಭಾಷಣೆಯನ್ನು ತನ್ನ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡು ಸಿ.ಡಿ.ಯನ್ನು ಮಾಡಿಸಿರುತ್ತೇನೆ ಅಂತಾ ಹೇಳಿರುತ್ತಾರೆ. ತನಗೆ ಹಣವನ್ನು ಕೊಡಲು ಇಷ್ಟವಿಲ್ಲದ್ದರಿಂದ ಹಾಸನ ಲೋಕಾಯುಕ್ತ ಠಾಣೆಗೆ ಹೋಗಿ ದೂರನ್ನು ಸಲ್ಲಿಸಿರುವುದಾಗಿ ಹೇಳಿರುತ್ತಾರೆ. ಅದನ್ನು ಪಡೆದುಕೊಂಡು ಹಾಸನ ಲೋಕಾಯುಕ್ತ ಠಾಣಾ ಮೊ.ನಂ.7/2015 ಕಲಂ 7(13)(1)(ಡಿ) ರೆಡ್ ವಿತ್ 13(2) ಪಿ.ಸಿ. ಕಾಯ್ದೆ 1988 ರೀತ್ಯಾ ಕೇಸು ದಾಖಲಿಸಿರುತ್ತಾರೆ.

15. ಶಿಸ್ತು ಪ್ರಾಧಿಕಾರ ದೂರುದಾರರನ್ನು ಪಿ.ಡಬ್ಲ್ಯೂ.1 ಎಂದು ನುಡಿಸಾಕ್ಷಿ ಮಾಡಿದ್ದು, ನಿ.ಪಿ.1 ರಿಂದ 5 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಳ್ಳಲಾಯಿತು. ಪಿ.ಡಬ್ಲ್ಯೂ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಜಮೀನು ಖಾತೆ ಮಾಡಿಸುವ ಸಲುವಾಗಿ ಆ.ಸ.ನೌ ರವರನ್ನು ಭೇಟಿಯಾದಾಗ ಅವರು ಖಾತೆ ಆಗಲು ತಡವಾಗುತ್ತದೆ ಅಂತಾ ಹೇಳಿದ್ದರು. ನಂತರ ಯಾರೋ ಲೋಕಾಯುಕ್ತ ಕಛೇರಿಗೆ ಹೋದರೆ ಅಲ್ಲಿ ಬೇಗ ಖಾತೆ ಮಾಡಿಸಿ ಕೊಡುತ್ತಾರೆ ಅಂತಾ ಹೇಳಿದ್ದರಿಂದ, ತಾನು ಲೋಕಾಯುಕ್ತ ಕಛೇರಿಗೆ ಹೋಗಿದ್ದೆ ಅಂತಾ ಹೇಳಿರುತ್ತಾರೆ. ಮುಂದುವರೆದು, ಆ.ಸ.ನೌ ರವರು ಖಾತೆ ಮಾಡಿಕೊಡುವ ಸಂಬಂಧ ಲಂಚದ ಹಣವನ್ನು ಕೇಳಿರುವುದಿಲ್ಲ ಅಂತಾ ನುಡಿದಿರುತ್ತಾರೆ. ಆದ್ದರಿಂದ, ಮಂಡನಾಧಿಕಾರಿಗಳು ದೂರುದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಿದಾಗ ದೂರಿನಲ್ಲಿ ಬರೆದ ವಿಷಯ ಅಲ್ಲಗಳೆದಿರುತ್ತಾರೆ. ಅದೇ ರೀತಿ ತನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಅದೇ ರೀತಿ ನಿ.ಪಿ.2 ಮತ್ತು 3ರಲ್ಲಿ ನಡೆದಂತಹ ಪ್ರಕ್ರಿಯೆಗಳ ಬಗ್ಗೆ ಕೇಳಿದಾಗ, ತನಗೇನು ಗೊತ್ತಿರುವುದಿಲ್ಲ ಅಂತಾ ನುಡಿದಿರುತ್ತಾರೆ.

16. ಶಿಸ್ತು ಪ್ರಾಧಿಕಾರವು ಶ್ರೀ. ಸಾಗರ ಆರ್ ಇವರನ್ನು ಪಿ.ಡಬ್ಲ್ಯೂ.2 ಎಂದು ಸಾಕ್ಷಿ ಮಾಡಿಸಿರುತ್ತಾರೆ. ಇವರು ನೆರಳು ಸಾಕ್ಷಿಯಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ: 18/05/2015 ರಂದು ಇವರ ಮೇಲಾಧಿಕಾರಿಗಳು ಇವರನ್ನು ಮತ್ತು ಇನ್ನೊಬ್ಬ ಶ್ರೀ. ರೇವಣ್ಣ ಆರ್ ರವರನ್ನು ಲೋಕಾಯುಕ್ತ ಕಛೇರಿಗೆ ಹೋಗಿ ತನಿಖೆಗೆ ಸಹಕರಿಸಬೇಕೆಂದು ಹೇಳಿ ಕಳುಹಿಸಿರುತ್ತಾರೆ. ಅದರಂತೆ ಬೆಳಗ್ಗೆ 10.40ಕ್ಕೆ ಹಾಸನ ಲೋಕಾಯುಕ್ತ ಕಛೇರಿಗೆ ಹೋಗಿರುತ್ತೇನೆ ಅಂತಾ ನುಡಿದಿರುತ್ತಾರೆ. ಅಲ್ಲಿಗೆ ಹೋದಾಗ ಲೋಕಾಯುಕ್ತ ಪೋಲಿಸರು ದೂರುದಾರರನ್ನು ಪರಿಚಯಿಸಿ ದೂರಿನಲ್ಲಿ ಬರೆದ ವಿಷಯವನ್ನು ತಿಳಿಸಿರುತ್ತಾರೆ. ಅದೇ ರೀತಿ ದೂರುದಾರರು ದಾಖಲಿಸಿಕೊಂಡ ಸಂಭಾಷಣೆಯನ್ನು ಸಿ.ಡಿ.ಯಲ್ಲಿ ಹಾಕಿ ಕೇಳಿಸಿರುತ್ತಾರೆ. ಅದರಲ್ಲಿ ಗ್ರಾಮ ಲೆಕ್ಕಾಧಿಕಾರಿಗಳು ರೂ.7,000/-ಗಳ ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಿದ್ದು, ಕೊನೆಗೆ ರೂ.3,000/-ಗಳ ಲಂಚದ ಹಣ ಪಡೆಯಲು ಒಪ್ಪಿದ್ದು ಅಂತಾ ರೆಕಾರ್ಡ್ ಆಗಿರುತ್ತದೆ ಅಂತಾ ಹೇಳಿರುತ್ತಾರೆ.

17. ನಂತರ ದೂರುದಾರರು ರೂ.1000/-ಗಳ 2 ನೋಟುಗಳನ್ನು ಮತ್ತು ರೂ.500/-ಗಳ 2 ನೋಟುಗಳನ್ನು ಹಾಜರುಪಡಿಸಿದ್ದು, ರೇವಣ್ಣ ರವರು ನೋಟುಗಳ ಸಂಖ್ಯೆಗಳನ್ನು ಇವರಿಗೆ ಬರೆಯಲು ಹೇಳಿದ್ದು, ಅದನ್ನು ತಾನು ಪ್ರತ್ಯೇಕ ಹಾಳೆಯಲ್ಲಿ ನಿ.ಪಿ.6ರಂತೆ ಬರೆದುಕೊಂಡಿರುತ್ತೇನೆ ಅಂತಾ ನುಡಿದಿರುತ್ತಾರೆ. ನಂತರ ಲೋಕಾಯುಕ್ತ ಸಿಬ್ಬಂದಿಯವರು ಆ ನೋಟುಗಳಿಗೆ ಫಿನಾಫ್ತಲಿನ್ ಪೌಡರನ್ನು ಲೇಪಿಸಿದ ನಂತರ ಪಂಚ ಸಾಕ್ಷಿ ರೇವಣ್ಣ ರವರು ತೆಗೆದುಕೊಂಡು ದೂರುದಾರರ ಶರ್ಟ್ ಜೇಬಿನಲ್ಲಿ ಇಟ್ಟರು ಅಂತಾ ನುಡಿದಿರುತ್ತಾರೆ. ನಂತರ ರೇವಣ್ಣ ರವರ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೊಳೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ ಅಂತಾ ನುಡಿದಿರುತ್ತಾರೆ.

18. ನಂತರ ದೂರುದಾರರಿಗೆ ಸದರಿ ಹಣವನ್ನು ಆ.ಸ.ನೌ ರವರು ಕೇಳಿದಾಗ ಕೊಡಬೇಕು ಅಂತಾ ಹೇಳಿ ಇವರನ್ನು ದೂರುದಾರರ ಜೊತೆಗೆ ನೆರಳು ಸಾಕ್ಷಿಯಾಗಿ ಹೋಗಿ, ನಡೆಯುವ ಎಲ್ಲಾ ವಿದ್ಯಾಮಾನಗಳನ್ನು ಗಮನಿಸಬೇಕೆಂದು ಹೇಳಿದ್ದು, ನಂತರ ದೂರುದಾರರಿಗೆ ಒಂದು ವಾಯ್ಸ್ ರೆಕಾರ್ಡರ್‌ನ್ನು ಕೊಟ್ಟು ಆ.ಸ.ನೌ ರವರೊಂದಿಗೆ ನಡೆಯುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ಹೇಳಿದ್ದು, ಆ.ಸ.ನೌ ರವರು ಹಣವನ್ನು ಕೇಳಿ ಪಡೆದ ನಂತರ ದೂರುದಾರರಿಗೆ ಹೊರಗೆ ಬಂದು ತಮ್ಮ ತಲೆಯನ್ನು ಬಲಗೈನಿಂದ ಸವರಿಕೊಳ್ಳುವ ಮೂಲಕ ಸನ್ನೆ ಮಾಡಬೇಕೆಂದು ಹೇಳಿರುತ್ತಾರೆ. ಈ ಬಗ್ಗೆ ನಿ.ಪಿ.2 ರಂತೆ ಮಹಜರ್‌ನ್ನು ಮಾಡಿರುತ್ತಾರೆ ಅಂತಾ ನುಡಿದಿರುತ್ತಾರೆ ಮತ್ತು ಈ ಪ್ರಕ್ರಿಯೆಗಳ ಬಗ್ಗೆ ನಿ.ಪಿ.4 ರಂತೆ ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ ಅಂತಾ ನುಡಿದಿರುತ್ತಾರೆ.

19. ನಂತರ ಬೆಳಗ್ಗೆ 11.50ಕ್ಕೆ ದೂರುದಾರರು, ಲೋಕಾಯುಕ್ತ ಅಧಿಕಾರಿ ಮತ್ತು ಸಿಬ್ಬಂದಿಗಳು ಇಲಾಖಾ ಜೀಪಿನಲ್ಲಿ ದೊಡ್ಡಮಗ್ಗೆ ಗ್ರಾಮದಲ್ಲಿರುವ ನಾಡ ಕಛೇರಿಗೆ ಹೋಗಿರುತ್ತೇವೆ ಅಂತಾ ನುಡಿದಿರುತ್ತಾರೆ. ಅಲ್ಲಿಗೆ ಹೋದಾಗ ಇವರನ್ನು ದೂರುದಾರರ ಜೊತೆಗೆ ಹೋಗಲು ಹೇಳಿದ್ದು, ಇವರು ಕಛೇರಿಯ ಒಳಗೆ ಹೋದಾಗ, ಆ.ಸ.ನೌ ರವರು ಕುಳಿತಿದ್ದು, ಅವರು ದೂರುದಾರರನ್ನು

ನೋಡಿ ಹಣವನ್ನು ತಂದಿರುತ್ತೀರಾ ಅಂತಾ ಕೇಳಿರುತ್ತಾರೆ. ಆಗ ದೂರುದಾರರು ತಂದಿದ್ದ ಹಣವನ್ನು ಆ.ಸ.ನೌ ರವರಿಗೆ ಕೊಟ್ಟಿದ್ದು, ಅವರು ತಮ್ಮ ಬಲಗೈನಿಂದ ಹಣವನ್ನು ಪಡೆದು ಎರಡೂ ಕೈಗಳಿಂದ ಎಣಿಸಿ ನಂತರ ತಮ್ಮ ಪ್ಯಾಂಟಿನ ಬಲಭಾಗದ ಹಿಂದಿನ ಜೇಬಿನಲ್ಲಿ ಇರಿಸಿಕೊಂಡಿರುತ್ತಾರೆ ಅಂತಾ ನುಡಿದಿರುತ್ತಾರೆ.

20.ಆ.ಸ.ನೌ ರವರು ದೂರುದಾರರಿಗೆ ಇವರು ಯಾರು ಎಂದು ಕೇಳಿದಾಗ, ದೂರುದಾರರು ತನ್ನ ಸಹೋದರ ಇರುತ್ತಾನೆ ಎಂದು ಹೇಳಿದ್ದರಿಂದ, ದೂರುದಾರರ ಸಹೋದರ ಒಂದು ಹೆಬ್ಬಟ್ಟಿನ ಸಹಿ ಹಾಕುವುದು ಬಾಕಿ ಇತ್ತು, ಹೀಗಾಗಿ ಆ.ಸ.ನೌ ರವರು ತನಗೆ ಒಂದು ಹೆಬ್ಬಟ್ಟಿನ ಸಹಿಯನ್ನು ಹಾಕಲು ಹೇಳಿದರು, ಅದರಂತೆ ಆ.ಸ.ನೌ ರವರು ತೋರಿಸಿದ ದಾಖಲಾತಿಯ ಮೇಲೆ ತನ್ನ ಹೆಬ್ಬಟ್ಟಿನ ಸಹಿಯನ್ನು ಒತ್ತಿದೆ, ನಂತರ ಅವರ ಕಛೇರಿಯಿಂದ ಹೊರಗೆ ಬಂದೆವು ಅಂತಾ ನುಡಿದಿರುತ್ತಾರೆ.

21. ನಂತರ ದೂರುದಾರರು ಸನ್ನೆಯನ್ನು ಮಾಡಿ ಲೋಕಾಯುಕ್ತ ಪೋಲಿಸರಿಗೆ ತಿಳಿಸಿದ್ದು, ಅವರು ಆ.ಸ.ನೌ ರವರ ಕಛೇರಿಗೆ ಬಂದು ಆ.ಸ.ನೌ ರವರನ್ನು ಪರಿಚಯಿಸಿಕೊಂಡು, ಹಣದ ಬಗ್ಗೆ ವಿಚಾರಿಸಿದಾಗ, ಆ.ಸ.ನೌ ರವರು ತಮ್ಮ ಪ್ಯಾಂಟಿನ ಜೇಬಿನಿಂದ ಹಣವನ್ನು ತೆಗೆದು ಕೊಟ್ಟಿರುತ್ತಾರೆ. ನಂತರ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಆ.ಸ.ನೌ ರವರ ಎರಡೂ ಕೈಗಳನ್ನು ಅದ್ದಿಸಿ ತೊಳೆದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ ಅಂತಾ ನುಡಿದಿರುತ್ತಾರೆ. ನಂತರ ಹಣವನ್ನು ಅಮಾನತ್ತುಪಡಿಸಿಕೊಂಡು, ಆ.ಸ.ನೌ ರವರಿಗೆ ಬೇರೆ ಪ್ಯಾಂಟಿನ ವ್ಯವಸ್ಥೆ ಮಾಡಿ ಅವರು ಧರಿಸಿದ್ದ ಪ್ಯಾಂಟಿನ ಜೇಬನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೊಳೆದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ ಅಂತಾ ನುಡಿದಿರುತ್ತಾರೆ. ನಂತರ ದೂರುದಾರರ ಕೆಲಸಕ್ಕೆ ಸಂಬಂಧಪಟ್ಟಂತೆ ಬಾಕಿ ಇದ್ದ ದಾಖಲಾತಿಗಳನ್ನು ಉಪತಹಶೀಲ್ದಾರ್ ರವರಿಂದ ದೃಢೀಕರಿಸಿಕೊಂಡು ನಿ.ಪಿ.5ರಂತೆ ಜಪ್ತಿ ಮಾಡಿರುತ್ತಾರೆ ಅಂತಾ ನುಡಿದಿರುತ್ತಾರೆ. ಮುಂದುವರೆದು, ತಮ್ಮ ಸಾಕ್ಷಿಯಲ್ಲಿ ಲಂಚದ ಹಣವನ್ನು ಕೊಡುವಾಗ ದೂರುದಾರರು ವಾಯ್ಸ್

ರೆಕಾರ್ಡರ್‌ನ್ನು ಆನ್ ಮಾಡಿಕೊಳ್ಳುವುದನ್ನು ಮರೆತಿದ್ದರು, ಹೀಗಾಗಿ ಈ ಮೊದಲು ರೆಕಾರ್ಡ್ ಮಾಡಿಕೊಂಡಿದ್ದ ಸಂಭಾಷಣೆಯನ್ನೇ ಉಪತಹಶೀಲ್ದಾರವರಿಗೆ ಕೇಳಿಸಿದಾಗ, ಆ.ಸ.ನೌ ರವರ ಧ್ವನಿಯನ್ನು ಗುರುತಿಸಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳ ಬಗ್ಗೆ ನಿ.ಪಿ.3 ರಂತೆ ಟ್ರಾಪ್ ಪಂಚನಾಮೆಯನ್ನು ಮಾಡಿರುತ್ತಾರೆ.

22.ಶಿಸ್ತು ಪ್ರಾಧಿಕಾರವು ತನಿಖಾಧಿಕಾರಿಗಳಾದ ಶ್ರೀ. ಶಾಂತಿನಾಥ ವನ್ನೂರು ರವರನ್ನು ಪಿ.ಡಬ್ಲ್ಯೂ.3 ಎಂದು ಸಾಕ್ಷಿ ಮಾಡಿಸಿರುತ್ತಾರೆ. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಪಿ.ಡಬ್ಲ್ಯೂ.2 ರವರು ಹೇಳಿದಂತೆ ಸಾಕ್ಷಿಯನ್ನು ನುಡಿದಿರುತ್ತಾರೆ. ಅಲ್ಲದೇ, ಪ್ರಥಮ ವರ್ತಮಾನ ವರದಿಯನ್ನು ನಿ.ಪಿ.8 ಎಂದು, ಪಂಚರನ್ನು ಪಂಚನಾಮೆಗೆ ಸಹಕರಿಸಬೇಕೆಂದು ಅವರ ಮೇಲಾಧಿಕಾರಿಗಳಿಗೆ ಬರೆದುಕೊಂಡ ಪತ್ರದ ನಕಲನ್ನು ನಿ.ಪಿ.9 ಎಂದು, ಸ್ಥಳ ಕಚ್ಚಾ ನಕಾಶೆಯನ್ನು ನಿ.ಪಿ.10 ಎಂದು ಗುರುತಿಸಿಕೊಂಡಿರುತ್ತಾರೆ. ನಂತರ ಸಾಕ್ಷಿದಾರರ ಹೇಳಿಕೆ ಪಡೆದಿರುತ್ತೇನೆ ಅಂತಾ ನುಡಿದಿರುತ್ತಾರೆ. ದಿನಾಂಕ: 19/05/2015 ರಂದು ಛಾಯಾಚಿತ್ರಗಳ ಪಂಚಾನಾಮೆಯನ್ನು ನಿ.ಪಿ.11 ರಂತೆ ಮಾಡಿರುತ್ತೇನೆ ಅಂತಾ ನುಡಿದಿರುತ್ತಾರೆ. ದಿನಾಂಕ: 28/08/2015 ರಂದು ಪಡೆದ ರಾಸಾಯನಿಕ ಪರೀಕ್ಷಾ ವರದಿಯನ್ನು ನಿ.ಪಿ.12 ಎಂದು ಗುರುತಿಸಿಕೊಂಡಿರುತ್ತಾರೆ. ದಿನಾಂಕ: 16/05/2015 ಕ್ಕೆ ಸಂಬಂಧಪಟ್ಟಂತೆ ದೂರುದಾರ ಮತ್ತು ಆ.ಸ.ನೌ ರವರ ನಡುವೆ ಆದ ಸಂಭಾಷಣೆಯ ಕಾಲ್ ವಿವರಣೆಯನ್ನು ನಿ.ಪಿ.13 ರಂತೆ ಪಡೆದುಕೊಂಡಿರುತ್ತೇನೆ ಅಂತಾ ನುಡಿದಿರುತ್ತಾರೆ. ದಿನಾಂಕ: 15/07/2015 ರಂದು ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿಯಿಂದ ಸ್ಥಳದ ನಕ್ಷೆಯನ್ನು ನಿ.ಪಿ.14 ರಂತೆ ಪಡೆದುಕೊಂಡಿರುತ್ತೇನೆ ಅಂತಾ ನುಡಿದಿರುತ್ತಾರೆ. ಅದೇ ರೀತಿ ದಿನಾಂಕ: 12/08/2015 ರಂದು ಆ.ಸ.ನೌ ರವರ ಸೇವಾ ವಿವರವನ್ನು ನಿ.ಪಿ.15 ರಂತೆ ಪಡೆದುಕೊಂಡಿರುತ್ತೇನೆ ಅಂತಾ ನುಡಿದಿರುತ್ತಾರೆ.

23.ಮೇಲೆ ಹೇಳಿದ ಸಾಕ್ಷಿ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ದೂರುದಾರರು ಪ್ರತಿಕೂಲ ಸಾಕ್ಷಿಯಾಗಿ ಸಾಕ್ಷಿ ನುಡಿದಿರುತ್ತಾರೆ. ಇವರು ತಮ್ಮ ಸಾಕ್ಷಿಯಲ್ಲಿ ಆ.ಸ.ನೌ ರವರು ಯಾವುದೇ

ಲಂಚದ ಹಣದ ಬೇಡಿಕೆ ಇಟ್ಟಿರುವುದಿಲ್ಲ ಮತ್ತು ತಾನು ಹಣವನ್ನು ಸಹ ಕೊಟ್ಟಿರುವುದಿಲ್ಲ ಅಂತಾ ನುಡಿದಿರುತ್ತಾರೆ. ಆದರೆ, ನೆರಳು ಸಾಕ್ಷಿದಾರರು ಶಿಸ್ತು ಪ್ರಾಧಿಕಾರದ ಪರವಾಗಿ ಸಾಕ್ಷಿ ನುಡಿದಿರುತ್ತಾರೆ. ನಿ.ಪಿ.2 ರಲ್ಲಿ ಅಂದರೆ ಪ್ರಾಯೋಗಿಕ ಪಂಚನಾಮೆಯಲ್ಲಿ ಆ.ಸ.ನೌ ಮತ್ತು ದೂರುದಾರರ ನಡುವೆ ಸಂಭಾಷಣೆಯಾದ ವಿವರಗಳನ್ನು ನಮೂದಿಸಿದ್ದು, ಅದನ್ನು ಪರಿಶೀಲಿಸಿದಾಗ ದಿನಾಂಕ: 16/05/2015 ಕ್ಕಿಂತಲೂ ಮೊದಲು ದೂರುದಾರ ಮತ್ತು ಆ.ಸ.ನೌ ರವರ ನಡುವೆ ಸಂಭಾಷಣೆ ಆಗಿರುತ್ತದೆ ಅಂತಾ ಕಂಡು ಬರುತ್ತದೆ. ಆದರೆ, ಅವುಗಳ ಬಗ್ಗೆ ತನಿಖಾಧಿಕಾರಿಗಳು ಯಾವುದೇ ಕಾಲ್ ವಿವರಗಳನ್ನು ಪಡೆದಿರುವುದಿಲ್ಲ. ಸದರಿ ಸಂಭಾಷಣೆಯಲ್ಲಿ ರೂ.3,000/-ಗಳ ಹಣವನ್ನು ಈಗ ಕೊಡಬೇಕು ಮಿಕ್ಕಿದ್ದನ್ನು ಆಮೇಲೆ ಕೊಡಬೇಕಂತ ಸಂಭಾಷಣೆಯಲ್ಲಿ ಕಂಡುಬರುತ್ತದೆ. ಪಿ.ಡಬ್ಲ್ಯೂ.2 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆ.ಸ.ನೌ ರವರು ರೂ.7,000/-ಗಳ ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಿದ್ದು, ಕೊನೆಗೆ ರೂ.3,000/-ಗಳ ಲಂಚದ ಹಣ ಕೊಡಲು ಒಪ್ಪಿದ್ದು, ರೆಕಾರ್ಡ್‌ನಲ್ಲಿ ಕೇಳಿಸಿದಾಗ ತಿಳಿದುಬಂದಿರುತ್ತದೆ ಅಂತಾ ಹೇಳಿರುತ್ತಾರೆ. ನಿ.ಪಿ.2ನ್ನು ಪರಿಶೀಲಿಸಿದಾಗ, ಅದರಲ್ಲಿ ಎಲ್ಲಿಯೂ ರೂ.7,000/-ಗಳ ಲಂಚದ ಹಣದ ಬೇಡಿಕೆ ಇಟ್ಟು ಕಡಿಮೆ ಮಾಡಿದ ಬಗ್ಗೆ ನಮೂದು ಇರುವುದಿಲ್ಲ. ಅಲ್ಲದೇ, ಸದರಿ ಸಂಭಾಷಣೆಯ ವಿವರಗಳನ್ನು ಪರಿಶೀಲಿಸಿದಾಗ ಮ್ಯುಟೇಷನ್ ಎಂಟ್ರಿಯನ್ನು ದೃಢೀಕರಿಸಲು ದೂರುದಾರರ ಹಿರಿಯ ಸಹೋದರನ ಸಹಿ ಸಹ ಬೇಕಾಗಿತ್ತು ಅಂತಾ ಕಂಡುಬರುತ್ತದೆ. ಈ ಬಗ್ಗೆ ಆ.ಸ.ನೌ ರವರು ದೂರುದಾರರಿಗೆ ಇವರ ಹಿರಿಯ ಸಹೋದರನಿಗೆ ಎಷ್ಟು ಸಲ ದೂರವಾಣಿ ಕರೆ ಮಾಡಿದರೂ ಸಹ ಬರಲಿಲ್ಲ ಅಂತಾ ಹೇಳಿದ್ದು ಕಂಡುಬರುತ್ತದೆ. ಇದರಲ್ಲಿ ಒಂದು ವಿಷಯವನ್ನು ಗಮನಿಸಬೇಕಾಗಿದ್ದು ಏನೆಂದರೆ ದೂರುದಾರರ ಹಿರಿಯ ಸಹೋದರ ಲಕ್ಷ್ಮಯ್ಯ ಈತನ ಸಹಿ ಇರಲಿಲ್ಲ ಅಂತಾ ಕಂಡುಬರುತ್ತದೆ. ಈ ವಿಷಯದ ಬಗ್ಗೆ ಪಿ.ಡಬ್ಲ್ಯೂ.2 ನೆರಳು ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆ.ಸ.ನೌ ರವರು ದೂರುದಾರರಿಗೆ ಇವರು ಯಾರು ಎಂದು ಕೇಳಿದಾಗ, ದೂರುದಾರರು ಇವರ ಸಹೋದರ ಇರುತ್ತಾನೆ ಎಂದು ಹೇಳಿದ್ದರಿಂದ, ದೂರುದಾರರ ಸಹೋದರ ಒಂದು ಹೆಬ್ಬಟ್ಟಿನ ಸಹಿ ಹಾಕುವುದು ಬಾಕಿ ಇತ್ತು, ಹೀಗಾಗಿ ಆ.ಸ.ನೌ ರವರು ತನಗೆ ಒಂದು ಹೆಬ್ಬಟ್ಟಿನ ಸಹಿಯನ್ನು

ಹಾಕಲು ಹೇಳಿದರು, ಇವರು ಆ.ಸ.ನೌ ರವರು ತೋರಿಸಿದ ದಾಖಲಾತಿಯ ಮೇಲೆ ತನ್ನ ಹೆಬ್ಬೆಟ್ಟಿನ ಸಹಿಯನ್ನು ಒತ್ತಿದೆ, ನಂತರ ಅವರ ಕಛೇರಿಯಿಂದ ಹೊರಗೆ ಬಂದೆವು ಅಂತಾ ನುಡಿದಿರುತ್ತಾರೆ. ನನ್ನ ಅಭಿಪ್ರಾಯದಲ್ಲಿ ನೆರಳು ಸಾಕ್ಷಿದಾರರು ಸರ್ಕಾರಿ ನೌಕರರಾಗಿದ್ದು, ಈ ರೀತಿ ತಾವೇ ದೂರುದಾರರ ಸಹೋದರ ಇರುತ್ತೇನೆ ಎಂದು ಹೇಳಿ ಏಕೆ ಹೆಬ್ಬೆಟ್ಟಿನ ಸಹಿ ಹಾಕಿರುತ್ತಾರೆ ಅಂತಾ ಗೊತ್ತಾಗುವುದಿಲ್ಲ.

24.ನಿ.ಪಿ.3ರಲ್ಲಿ ಮಧ್ಯಾಹ್ನ 1 ಗಂಟೆಗೆ ದೂರುದಾರರು ಆ.ಸ.ನೌ ರವರ ಕಛೇರಿಯಿಂದ ಹೊರಗೆ ಬಂದು ಸನ್ನೆಯನ್ನು ನೀಡಿದ್ದು, ನಂತರ ಪೋಲಿಸರು ಮತ್ತು ಸಿಬ್ಬಂದಿಗಳು ಸ್ಥಳಕ್ಕೆ ಬಂದು ದೂರುದಾರರನ್ನು ವಿಚಾರಿಸಿದಾಗ "ನಾನು ಆರೋಪಿಯನ್ನು ಕಾಣಲು ಪಂಚ-2 ಇವರೊಂದಿಗೆ ಕಛೇರಿಗೆ ಹೋಗಿದ್ದು, ಆರೋಪಿಗೆ ಸಂಶಯ ಬರೆದುಬಹುದೆಂಬ ಕಾರಣಕ್ಕೆ ನೀವು ಯಾರು ಎಂದು ಕೇಳಿದರೆ, ನನ್ನ ಸಹೋದರ ಲಕ್ಷ್ಮಯ್ಯ ಎಂದು ತಿಳಿಸುವಂತೆ, ಪಂಚ-2 ಸಾಗರ್ ರವರಿಗೆ ತಿಳಿಸಿದೆನು" ಅಂತಾ ನಮೂದು ಇರುತ್ತದೆ. ದೂರುದಾರರು ಈ ರೀತಿ ಏಕೆ ಹೇಳಿರುತ್ತಾರೆ ಮತ್ತು ನೆರಳು ಸಾಕ್ಷಿದಾರರು ಅದಕ್ಕೆ ಏಕೆ ಒಪ್ಪಿಕೊಂಡಿರುತ್ತಾರೆ ಅಂತಾ ತಿಳಿದು ಬರುವುದಿಲ್ಲ. ಪಿ.ಡಬ್ಲ್ಯೂ.3 (ತನಿಖಾಧಿಕಾರಿಗಳು) ತಮ್ಮ ಮುಖ್ಯ ವಿಚಾರಣೆಯಲ್ಲಿ ದಾಖಲಾತಿಗಳನ್ನು ಅಮಾನತ್ತುಪಡಿಸಿಕೊಂಡ ನಂತರ ದಾಖಲಾತಿಗಳ ಮೊದಲ ಮುಖಪುಟದ ಮೇಲೆ ನೆರಳು ಸಾಕ್ಷಿದಾರರು ತನ್ನ ಹೆಬ್ಬರಳಿನ ಸಹಿ ಇರುತ್ತದೆ ಅಂತಾ ತಿಳಿಸಿದ್ದು, ಆ ಹೆಬ್ಬರಳಿನ ಗುರುತನ್ನು ಪ್ರತ್ಯೇಕವಾಗಿ ಮಾರ್ಕ್ ಮಾಡಿ ಗುರುತುಪಡಿಸಿಕೊಂಡೆ ಅಂತಾ ನುಡಿದಿರುತ್ತಾರೆ. ನಂತರ ಅಲ್ಲಿಯೇ ಹಾಜರಿದ್ದ ದೂರುದಾರರ ಸಹೋದರರಾದ ಲಕ್ಷ್ಮಯ್ಯ ರವರ ಹೆಬ್ಬೆಟ್ಟಿನ ಸಹಿಯನ್ನು ಇವರ ಸಮಕ್ಷಮ ಹಾಗೂ ಉಪತಹಶೀಲ್ದಾರರ ಸಮಕ್ಷಮ ಆ.ಸ.ನೌ ರವರೇ ಲಕ್ಷ್ಮಯ್ಯ ನವರ ಹೆಬ್ಬೆಟ್ಟಿನ ಸಹಿಯನ್ನು ಪಡೆದರು ಎಂದು ನುಡಿದಿರುತ್ತಾರೆ. ಈ ವಿಷಯದ ಬಗ್ಗೆ ದೂರುದಾರರ ಸಹೋದರ ಲಕ್ಷ್ಮಯ್ಯ ಇವರು ಹಾಜರಿದ್ದ ಬಗ್ಗೆ ಯಾವುದೇ ದಾಖಲಾತಿಗಳು ಕಂಡುಬರುವುದಿಲ್ಲ. ಒಂದು ವೇಳೆ ಲಕ್ಷ್ಮಯ್ಯ ರವರು ಅಲ್ಲೇ ಹಾಜರಿದ್ದಿದ್ದೇ ಆದರೆ ದೂರುದಾರರು ನೆರಳು

ಸಾಕ್ಷಿದಾರನನ್ನು ತನ್ನ ಹಿರಿಯ ಸಹೋದರ ಎಂದು ಏಕೆ ಪರಿಚಯ ಮಾಡಿಸಿರುತ್ತಾರೆ ಮತ್ತು ಮ್ಯುಟೇಷನ್ ದಾಖಲಾತಿಯ ಮೇಲೆ ಏಕೆ ಸಹಿ ಮಾಡಿಸಿರುತ್ತಾರೆ ಅಂತಾ ತಿಳಿದು ಬರುವುದಿಲ್ಲ.

25. ತನಿಖಾಧಿಕಾರಿಗಳು (ಪಿ.ಡಬ್ಲ್ಯೂ.3) ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆ.ಸ.ನೌ ರವರಿಗೆ ದೂರುದಾರರಿಂದ ಪಡೆದ ಹಣದ ಬಗ್ಗೆ ವಿಚಾರಿಸಿದಾಗ ಅವರು ತಮ್ಮ ಪ್ಯಾಂಟಿನ ಹಿಂಭಾಗದ ಬಲಜೇಬಿನಲ್ಲಿ ಇರುವುದಾಗಿ ತಿಳಿಸಿದ್ದು, ಆಗ ಅದನ್ನು ಪಂಚಸಾಕ್ಷಿ ಸಾಗರ್ ಇವರಿಂದ ಹೊರತೆಗೆಸಿರುತ್ತಾರೆ ಅಂತಾ ನುಡಿದಿರುತ್ತಾರೆ. ಆದರೆ, ನೆರಳು ಸಾಕ್ಷಿದಾರರಾದ ಸಾಗರ್ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತನಿಖಾಧಿಕಾರಿಗಳು ಆ.ಸ.ನೌ ರವರಿಗೆ ಹಣದ ಬಗ್ಗೆ ವಿಚಾರಿಸಿದಾಗ, ಆ.ಸ.ನೌ ರವರು ತಮ್ಮ ಪ್ಯಾಂಟಿನ ಜೇಬಿನಿಂದ ಹಣವನ್ನು ತೆಗೆದು ಮುಂದಿರಿಸಿರುತ್ತಾರೆ ಅಂತಾ ನುಡಿದಿರುತ್ತಾರೆ. ಈ ವಿಚಾರಣೆಯಲ್ಲಿ ಪ್ರಕ್ರಿಯೆಗಳ ಬಗ್ಗೆ ಛಾಯಾಚಿತ್ರಗಳನ್ನು ತೆಗೆದಿದ್ದು, ಅವುಗಳನ್ನು ನಿ.ಪಿ.4 ಎಂದು ಗುರುತಿಸಲಾಗಿರುತ್ತದೆ. ಅದರಲ್ಲಿ ಅನುಕ್ರಮ ನಂ.26 ರಲ್ಲಿ ಛಾಯಾಚಿತ್ರದ ಪ್ರಕಾರ ಪಿ.ಡಬ್ಲ್ಯೂ.2 ರವರು ಆ.ಸ.ನೌ ರವರ ಜೇಬಿನಿಂದ ಹಣವನ್ನು ತೆಗೆಯುತ್ತಿದ್ದ ಬಗ್ಗೆ ಕಂಡು ಬರುತ್ತದೆ. ಆದರೆ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆ.ಸ.ನೌ ರವರ ಪ್ಯಾಂಟಿನ ಜೇಬಿನಿಂದ ಹಣವನ್ನು ತೆಗೆದಿರುತ್ತೇನೆ ಅಂತಾ ನುಡಿದಿರುವುದಿಲ್ಲ. ಪಿ.ಡಬ್ಲ್ಯೂ.2 ರವರು ತಮ್ಮ ಪಾಟಿಸವಾಲಿನಲ್ಲಿ ಆ.ಸ.ನೌ ರವರ ಕಛೇರಿಯ ಒಳಗಡೆ ಹೋದಾಗ ಆ.ಸ.ನೌ ರವರು ಸೇರಿ 3-4 ಜನ ಸಿಬ್ಬಂದಿಗಳು ಇದ್ದರು ಅಂತಾ ನುಡಿದಿರುತ್ತಾರೆ. ಅಂದರೆ ಇವರೆಲ್ಲರ ಸಮಕ್ಷಮ ಆ.ಸ.ನೌ ರವರು ಹಣ ತೆಗೆದುಕೊಂಡರೆ ಅಥವಾ ಅವರನ್ನು ಹೊರಗಡೆ ಕಳುಹಿಸಿ ತೆಗೆದುಕೊಂಡರೆ ಎನ್ನುವ ವಿಷಯದ ಬಗ್ಗೆ ಸಾಕ್ಷಿ ನುಡಿದಿರುವುದಿಲ್ಲ. ಆದರೆ, ದೂರುದಾರರು ಮಾತ್ರ ತಾನು ಆ.ಸ.ನೌ ರವರಿಗೆ ಯಾವುದೇ ಲಂಚದ ಹಣವನ್ನು ಕೊಟ್ಟಿರುವುದಿಲ್ಲ ಅಂತಾ ನುಡಿದಿರುತ್ತಾರೆ. ಪಿ.ಡಬ್ಲ್ಯೂ.2 ಮತ್ತು ಪಿ.ಡಬ್ಲ್ಯೂ.3 ರವರುಗಳು ತಮ್ಮ ಮುಖ್ಯ ವಿಚಾರಣೆಯಲ್ಲಿ ದೂರುದಾರರು ಲಂಚದ ಹಣವನ್ನು ಕೊಡುವಾಗ ವಾಯ್ಸ್ ರೆಕಾರ್ಡರ್‌ನ್ನು ಆನ್ ಮಾಡುವುದನ್ನು ಮರೆತಿದ್ದರು ಅಂತಾ ನುಡಿದಿರುತ್ತಾರೆ. ಆದ್ದರಿಂದ, ನನ್ನ ಅಭಿಪ್ರಾಯದಲ್ಲಿ ಇವರಿಬ್ಬರ ಸಾಕ್ಷಿಯು ಲಂಚದ ಹಣವನ್ನು

ಆ.ಸ.ನೌ ರವರಿಂದ ಅಮಾನತ್ತುಪಡಿಸಿಕೊಂಡ ಬಗ್ಗೆ ವಿರೋದಾಬಾಸ ಇರುವುದರಿಂದ ಮತ್ತು ದೂರುದಾರರು ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ, ಆ.ಸ.ನೌ ರವರು ಲಂಚದ ಹಣ ಬೇಡಿಕೆ ಇಟ್ಟ ಬಗ್ಗೆ ಹಾಗೂ ಪಡೆದುಕೊಂಡ ಬಗ್ಗೆ ಶಿಸ್ತು ಪ್ರಾಧಿಕಾರವು ರುಜುವಾತುಪಡಿಸಿರುವುದಿಲ್ಲ.

26.ಪಿ.ಡಬ್ಲ್ಯೂ.3 ರವರು ದೂರುದಾರರಿಗೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ ಅಂತಾ ನುಡಿದಿದ್ದು, ಸದರಿ ದಾಖಲಾತಿಗಳನ್ನು (ಒಟ್ಟು 13 ದಾಖಲಾತಿಗಳು) ನಿ.ಪಿ.5 ಎಂದು ಗುರುತಿಸಲಾಗಿರುತ್ತದೆ. ನಿ.ಪಿ.5ರ ಮೊದಲನೆಯ ದಾಖಲಾತಿ ಖಾತೆ ಬದಲಾವಣೆಗಾಗಿ ಯಾರಾದರೂ ತಕರಾರು ಇದ್ದರೆ 30 ದಿನಗಳಲ್ಲಿ ತಕರಾರನ್ನು ಸಲ್ಲಿಸುವ ಸಲುವಾಗಿ ಪ್ರಚುರಪಡಿಸಿದ್ದು ಇರುತ್ತದೆ. ಸದರಿ ದಾಖಲಾತಿಯನ್ನು ಪರಿಶೀಲಿಸಿದಾಗ, ದೂರುದಾರರ ತಾಯಿಯ ಆಸ್ತಿಯನ್ನು, ದೂರುದಾರ ಹಾಗೂ ಆತನ ಇಬ್ಬರು ಸಹೋದರರಾದ ಲಕ್ಷ್ಮಯ್ಯ ಮತ್ತು ಶಂಕರ್ ಇವರ ನಡುವೆ ಆಸ್ತಿಯನ್ನು ವಿಭಾಗ ಮಾಡಿಕೊಂಡ ಬಗ್ಗೆ ಇರುತ್ತದೆ. ಈ ವಿಭಾಗದ ಪ್ರಕಾರ ಲಕ್ಷ್ಮಯ್ಯ ಈತನಿಗೆ 0.27 ಗುಂಟೆ, ಶಂಕರ್ ಇವರಿಗೆ 1.14 ಗುಂಟೆ ಹಾಗೂ ದೂರುದಾರರಿಗೆ 1.14 ಗುಂಟೆ ವಿಭಾಗ ಪತ್ರದ ಪ್ರಕಾರ ಬಂದಿರುತ್ತದೆ ಅಂತಾ ನಮೂದು ಇರುತ್ತದೆ. ಸದರಿ ಅರ್ಜಿಗೆ ಮೊದಲು ಶಂಕರ್, ಇವರ ತಾಯಿ ಲಕ್ಷಮ್ಮ ಮತ್ತು ದೂರುದಾರರ ಸಹಿಗಳು ಇರುತ್ತವೆ. ನನ್ನ ಅಭಿಪ್ರಾಯದಲ್ಲಿ ಸದರಿ ದಾಖಲಾತಿಯ ಮೇಲೆ ಲಕ್ಷ್ಮಯ್ಯ ಈತನ ಸಹಿ ಇರಲಿಲ್ಲ ಎಂದು ಕಂಡುಬರುತ್ತದೆ. ಏಕೆಂದರೆ, ಪಿ.ಡಬ್ಲ್ಯೂ.2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾನು ದೂರುದಾರರ ಜೊತೆಗೆ ಆ.ಸ.ನೌ ರವರ ಕಛೇರಿಯ ಒಳಗಡೆ ಹೋಗುವ ಪೂರ್ವದಲ್ಲಿ ದೂರುದಾರರ ಇವರಿಗೆ ಆ.ಸ.ನೌ ರವರು ನೀವು ಯಾರು ಅಂತಾ ಕೇಳಿದರೆ, ದೂರುದಾರರ ಸಹೋದರ ಇರುತ್ತೇನೆ ಅಂತಾ ಹೇಳಬೇಕು ಎಂದು ಹೇಳಿದ್ದು, ಆ.ಸ.ನೌ ರವರ ಕಛೇರಿಯ ಒಳಗಡೆ ಹೋದ ನಂತರ, ಆ.ಸ.ನೌ ರವರು ಪಿ.ಡಬ್ಲ್ಯೂ.2 ರವರ ಪರಿಚಯದ ಬಗ್ಗೆ ವಿಚಾರಿಸಿದಾಗ, ಪಿ.ಡಬ್ಲ್ಯೂ.2 ಇವರು ತಾನು ದೂರುದಾರರ ಸಹೋದರ ಲಕ್ಷ್ಮಯ್ಯ ಇರುತ್ತೇನೆ ಅಂತಾ ಹೇಳಿದ್ದರಿಂದ, ಸದರಿ ದಾಖಲಾತಿಗೆ ಆ.ಸ.ನೌ ರವರು ಪಿ.ಡಬ್ಲ್ಯೂ.2 ಇವರ ಹೆಬ್ಬೆಟ್ಟಿನ ಗುರುತನ್ನು ಹಾಕಿಸಿಕೊಂಡಿರುತ್ತಾರೆ. ಪಿ.ಡಬ್ಲ್ಯೂ.3 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ

ದೂರುದಾರರ ಸಹೋದರ ಲಕ್ಷ್ಮಯ್ಯ ಇವರು ಟ್ರಾಪ್ ವೇಳೆಯಲ್ಲಿ ಹಾಜರಿದ್ದು, ಆ.ಸ.ನೌ ರವರು ಪಿ.ಡಬ್ಲ್ಯೂ.3 ಇವರ ಸಮಕ್ಷಮ ಹಾಗೂ ಉಪ ತಹಶೀಲ್ದಾರರ ಸಮಕ್ಷಮ ಲಕ್ಷ್ಮಯ್ಯ ಇವರ ಹೆಬ್ಬೆಟ್ಟಿನ ಸಹಿಯನ್ನು ಹಾಕಿಸಿಕೊಂಡಿರುತ್ತಾರೆ ಅಂತಾ ನುಡಿದಿರುತ್ತಾರೆ. ಒಂದು ವೇಳೆ ಪಿ.ಡಬ್ಲ್ಯೂ.2 ಇವರ ಹೆಬ್ಬೆಟ್ಟಿನ ಗುರುತನ್ನು ಆ.ಸ.ನೌ ರವರ ಕಡೆಯಿಂದ ಹಾಕಿಕೊಂಡಿದ್ದರೆ, ದೂರುದಾರರ ಸಹೋದರ ಲಕ್ಷ್ಮಯ್ಯ ಈತನ ಹೆಬ್ಬೆಟ್ಟಿನ ಗುರುತನ್ನು ಏಕೆ ಹಾಕಿಸಿಕೊಂಡಿರುತ್ತಾರೆ ಎನ್ನುವ ಬಗ್ಗೆ ತನಿಖಾಧಿಕಾರಿಗಳು ವಿವರಣೆ ನೀಡಿರುವುದಿಲ್ಲ. ಈ ಎಲ್ಲಾ ಸಂದರ್ಭಗಳು ಗಣನೆಗೆ ತೆಗೆದುಕೊಂಡಾಗ ಲಕ್ಷ್ಮಯ್ಯ ನವರ ಸಹಿ ಇಲ್ಲದೇ ಅರ್ಜಿಯನ್ನು ಸಲ್ಲಿಸಿದ್ದು ಕಂಡುಬರುತ್ತದೆ. ಆದ್ದರಿಂದ, ಆ.ಸ.ನೌ ರವರು ದೂರುದಾರರ ಸಹೋದರರಾದ ಲಕ್ಷ್ಮಯ್ಯ ಈತನಿಗೆ ಕರೆದುಕೊಂಡು ಬರಬೇಕೆಂದು ಸಂಭಾಷಣೆಯಲ್ಲಿ (ನಿ.ಪಿ.2) ನಮೂದು ಇರುತ್ತದೆ ಅಂತಾ ಕಂಡುಬರುತ್ತದೆ.

27. ಈ ಮೇಲ್ಕಂಡ ಕಾರಣಗಳು ಮತ್ತು ಚರ್ಚೆಯಿಂದಾಗಿ, ಆ.ಸ.ನೌ ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ ವಿಫಲವಾಗಿರುತ್ತದೆ ಎನ್ನುವ ನಿರ್ಣಯಕ್ಕೆ ಬಂದು ಅಂಶ–1ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

28. **ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.**

## ನಿರ್ಣಯ

ಆ.ಸ.ನೌಕರ **ಶ್ರೀ. ಬಿ.ಎ ಪ್ರವೀಣ್‌ಕುಮಾರ್,** ಗ್ರಾಮ ಲೆಕ್ಕಿಗರು, ಸಂತೆಮರೂರು ವೃತ್ತ, ದೊಡ್ಡಮಗ್ಗೆ ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತುಪ್ರಾಧಿಕಾರವು ವಿಫಲವಾಗಿರುತ್ತದೆ ಎಂದು ನಿರ್ಣಯಿಸಲಾಗಿದೆ.

**ಆ.ಸ.ನೌರವರ ನಿವೃತ್ತಿ ದಿನಾಂಕ: 31/08/2042 ಆಗಿರುತ್ತದೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

18/2

**(ಸುದೇಶ್ ರಾಜಾರಾಮ್ ಪರದೇಶಿ)**
ಅಪರ ನಿಬಂಧಕರು ವಿಚಾರಣೆಗಳು-14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

# ANNEXURES

| Sl. No. | Particulars of Documents | |
|---|---|---|
| 1 | **Witness examined on behalf of the Disciplinary Authority** | |
| | **PW-1** | Sri. J. Shankar S/o Javaraiah, Tailor, Dummi, Arakalgudu, Hassan District. |
| | **PW-2** | Sri. Sagar R S/o late Rangegowda, SDA, KGID Office, Hassan. |
| | **PW-3** | Sri. Santhinatha Vannuru S/o Jinnappa, Police Inspector, Police Training Centre, Santhigrama, Hassan. |
| 2 | **Documents marked on behalf of the Disciplinary Authority Ex.P-1 to Ex.P-15** | |
| | **Ex.P.1** | Complaint dtd: 18/05/2015 given to Police Inspector, KLA, Hassan. |
| | **Ex.P.2, 2(a) & 2(b)** | Mahazar with Signatures. |
| | **Ex.P.3, 3(a) & 3(b)** | Trap mahazar with Signatures. |
| | **Ex.P.4** | Xerox coy of photographs. |
| | **Ex.P.5& 5(a)** | Documents regarding khata. |
| | **Ex.P.6 &** | List of currency note numbers with signature & |

| | | |
|---|---|---|
| | **6(a)** | letter of PI, KLA, Hassan. |
| | **Ex.P.7& 7(a)** | Statement of DGO with signatures. |
| | **Ex.P.8** | FIR. |
| | **Ex.P.9** | Letter dtd: 18/05/2015 addressed by Police Inspector, KLA, Hassan. |
| | **Ex.P. 10** | Sketch map. |
| | **Ex.P. 11 & 11(a)** | Mahazar with Signature. |
| | **Ex.P. 12 & 12(a)** | Chemical Test Report. |
| | **Ex.P. 13** | Details of call records. |
| | **Ex.P. 14** | Sketch map. |
| | **Ex.P. 15** | Service details of DGO submitted by Tahasildar, Arakalgudu Taluk. |

Dated this the 18th February, 2022

Paradeshi 18/2

**(SUDESH RAJARAM PARADESHI)**
Additional Registrar Enquiries-14,
Karnataka Lokayukta,
Bangalore.